**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.3**

**ಚಾಸಾ.16**

ಸಾಕ್ಷಿದಾರರ ಹೆಸರು - ಪ್ರಮೀಳಾ

ಗಂಡನ ಹೆಸರು - ರವೀಂದ್ರ

ವಯಸ್ಸು - 30 ವರ್ಷ

ಉದ್ಯೋಗ - ಹಾಲು ಡೈರಿ

ವಿಳಾಸ - ಕುಕ್ಕೆಹಳ್ಳಿ ಗ್ರಾಮ, ಉಡುಪಿ ತಾಲೂಕು.

ದಿನಾಂಕಃ 18-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ಕಳೆದ ಐದು ವರ್ಷಗಳಿಂದ ಕುಕ್ಕೆಹಳ್ಳಿ ಹಾಲು ಡೈರಿಯಲ್ಲಿ ಗಣಕಯಂತ್ರ ಅಪರೇಟರ್ ಆಗಿ ಕೆಲಸ ಮಾಡುತ್ತಿದ್ದೆ. ಕೆಳದ ಮೂರು ವರ್ಷದ ಹಿಂದೆ ನನ್ನ ಗಂಡನ ಮೇಲೆ ಮರ ಬಿದ್ದು ಮೃತಪಟ್ಟಿರುತ್ತಾರೆ. ನಂತರ ನಾನು ಕುಕ್ಕೆಹಳ್ಳಿಯಲ್ಲಿ ತಾಯಿಯ ಮನೆಯಲ್ಲಿ ವಾಸ ಮಾಡುತ್ತಿದ್ದೆ. ನನಗೆ ಮೃತ ಕೃತಿಕ್ ನ ಪರಿಚಯ ಇತ್ತು. ಆತನು ನಮ್ಮ ಡೈರಿಗೆ ಹಾಲು ಹಾಕುತ್ತಿದ್ದ. ಆತನ ತಂದೆ ಕಳೆದ ವರ್ಷ ಎಪ್ರಿಲ್ ತಿಂಗಳಲ್ಲಿ ಮೃತಪಟ್ಟಿರುತ್ತಾರೆ. ಆತನ ತಂದೆಯಹೆಸರಿನಲ್ಲಿ ಡೈರಿ ಸದಸ್ಯತ್ವ ಇದ್ದು ಅವರು ಮೃತಪಟ್ಟ ಕಾರಣ ಕೃತಿಕ್ ನ ಹೆಸರಿಗೆ ಬದಲಾವಣೆ ಮಾಡುವ ಸಲುವಾಗಿ ದಾಖಲೆಗಳನ್ನು ಒದಗಿಸುವಂತೆ ಆತನಿಗೆ ತಿಳಿಸಿದ್ದೆ. ಆ ಸಮಯದಲ್ಲಿ ನನಗೆ ಮೃತ ಕೃತಿಕ್ ನ ಮೊಬೈಲ್ ನಂಬರ್ ಸಿಕ್ಕಿದ್ದು ನಾನು ಮತ್ತು ಅವನು ಮೊಬೈಲಿನಲ್ಲಿ ಮಾತನಾಡುತ್ತಿದ್ದೆವು. ಯೋಗ ಕ್ಷೇಮ ವಿಚಾರಿಸಲು ಆತ ನಮ್ಮ ಮನೆಗೆ ಬರುತ್ತಿದ್ದ. ಆತನಿಗೆ ತಂದೆ ತಾಯಿ ಇಲ್ಲದೇ ಇರುವ ವಿಚಾರದಲ್ಲಿ ನನ್ನೊಂದಿಗೆ ಬೇಜಾರು ವ್ಯಕ್ತಪಡಿಸುತ್ತಿದ್ದ. ಆ ಸಮಯದಲ್ಲಿ ಕೃತಿಕನು ನನಗೆ ಯಾರನ್ನಾದರೂ ಎರಡನೇ ಮದುವೆ ಮಾಡಿಕೊಳ್ಳುವಂತೆ ಸಲಹೆ ನೀಡಿದ್ದ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ

ಇದೆ. ಆತನು ಸಹಾ ನಮ್ಮ ಡೈರಿಗೆ ಬರುತ್ತಿದ್ದ. ಕೃತಿಕನ ತಂದೆ ಮರಣ ಹೊಂದಿದಾಗ ಅವರ ಹೆಸರಿನಲ್ಲಿದ್ದ ಹಣವನ್ನು ಪೆರ್ಡೂರು ಬ್ಯಾಂಕಿನಲ್ಲಿ ಇಟ್ಟಿರುವುದಾಗಿ ನನ್ನ ಬಳಿ ಹೇಳಿಕೊಳ್ಳುತ್ತಿದ್ದ.

2. ದಿನಾಂಕ 05-11-2022 ರಂದು ನನ್ನ ಮಗುವಿಗೆ ಜ್ವರ ಬಂದಿದ್ದು ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ನನಗೆ ಸಹಾಯ ಮಾಡಿದ್ದ. ಆ ಸಮಯದಲ್ಲಿ ಆತನು ನನಗೆ ರೂ.7,000/- ಹಣ ಕೊಟ್ಟಿದ್ದ. ಅದರ ಮರುಪಾವತಿಗಾಗಿ ನನ್ನ ಒಂದು ಚಿನ್ನದ ಉಂಗುರವನ್ನು ಆತನಿಗೆ ಕೊಟ್ಟಿದ್ದೆ.

3. ದಿನಾಂಕ 14-09-2016 ರಂದು ಬೆಳಿಗ್ಗೆ 8-30 ರ ಸಮಯದಲ್ಲಿ ನಾನು ಡೈರಿಯಲ್ಲಿದ್ದಾಗ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದು ಬಂತು. ಆದರೆ ಕೃತಿಕನು ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಯಲ್ಲ. ಮೃತ ದೇಹದಲ್ಲಿ ಶಾರದಾ ಎಂಬವರ ಹೆಸರನ್ನು ಬರೆದು ಡೆತ್ ನೋಟ್ ದೊರತಿರುವುದು ತಿಳಿಯಿತು. ಕೃತಿಕನ ಮರಣವಾದ ನಂತರ ನನಗೆ ತಿಳಿದು ಬಂದ ವಿಚಾರ ಏನೆಂದರೆ ಆರೋಪಿಯು ಕೃತಿಕನ ಬ್ಯಾಂಕ್ ಖಾತೆಯಿಂದ ಹಣ ತೆಗೆಸಿ ಆತನಿಂದ ಪಡೆದುಕೊಂಡು ಆತನಿಗೆ ಮದುವೆ ಮಾಡಿಸುವುದಾಗಿ ಹೇಳಿ ಆತನು ಬ್ಯಾಂಕ್ ನಲ್ಲಿ ಇಟ್ಟಿದ್ದ ಚಿನ್ನವನ್ನು ತರಿಸಿ ಅವುಗಳನ್ನು ಕೃತಿಕ್ ಧರಿಸಿ ಪೋಟೋ ತೆಗೆದು ಮದುವೆ ಮಾಡಿಸುವುದಾಗಿ ನಂಬಿಸಿ, ಮರಣ ಪತ್ರವನ್ನು ಆರೋಪಿಯು ನಾಟಕವಾಡಿ ಕೃತಿಕನ ಕೈಯಿಂದ ಬರೆಸಿ ಆತನು ಆತ್ಮಹತ್ಯೆ ಮಾಡಿದಂತೆ ವೀಡಿಯೋ ಮಾಡಿ ಆತನನ್ನು ಕೊಲೆ ಮಾಡಿದ ವಿಚಾರ ಮೃತನ ಮೊಬೈಲ್ ಪೋನ್ ಅನ್ನು ನದಿಗೆ ಎಸೆದು ಆರೋಪಿಯು ತನ್ನ ಬಟ್ಟೆಗಳನ್ನು ಸಹಾ ನದಿಗೆ ಬೀಸಾಡಿರುವ ಬಗ್ಗೆ ತಿಳಿಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್. ಎ. ರವರಿಂದ</u>**

ನನ್ನನ್ನು ಕೆಲವೊಮ್ಮೆ ಕೃತಿಕನು ಆತನ ಸ್ಕೂಟರ್ ನಲ್ಲಿ ಬಿಡುತ್ತಿದ್ದ. ಕೃತಿಕನು ಮೃತ ಹೊಂದಿದ ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ತದನಂತರ 10, 15 ದಿನದ ನಂತರ ವಿಚಾರಣೆ ಮಾಡಿದ್ದಾರೆ.  ಎರಡು ಬಾರಿ ಮಾತ್ರ ವಿಚಾರಣೆ ಮಾಡಿದ್ದಾರೆ. ಎಷ್ಟು ಹಣ ಯಾವ ಬ್ಯಾಂಕಿನಲ್ಲಿ ಇದೆ ಎಂದು ನಿರ್ಧಿಷ್ಟವಾಗಿ ನನಗೆ ಗೊತ್ತಿಲ್ಲ. ಆರೋಪಿ ಕೃತಿಕನೊಂದಿಗೆ ನಾಟಕವಾಡಿ ಆತನನ್ನು ಕೊಲೆ ಮಾಡಿದ ವಿಚಾರವನ್ನು ನನಗೆ ಚಾಸಾ1 ಇವರು ಹೇಳಿ ತಿಳಿಯಿತು. ವೀಡಿಯೋ ಆಡಿಯೋ ಕ್ಲಿಪಿಂಗ್ ದೊರೆತ ಬಗ್ಗೆ ಬೇರೆಯವರು ಹೇಳಿ ಗೊತ್ತಾಯಿತು. ಕೃತಿಕ ಮರಣ ಹೊಂದಿದ ಎಷ್ಟು  ಸಮಯದ ನಂತರ ಈ ವಿಚಾರ ಗೊತ್ತಾಯಿತು ಎಂದು ನೆನಪಿಲ್ಲ. ಮುಖ್ಯ ವಿಚಾರಣೆಯಲ್ಲಿ

ಹೇಳಿದ ವಿಚಾರಗಳನ್ನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಕೃತಿಕನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೋಲಿಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಕೃತಿಕನ ಮೊಬೈಲ್ ಪೋನ್ ಮತ್ತು ಆರೋಪಿಯ ಬಟ್ಟೆಯನ್ನು ನದಿಗೆ ಎಸೆದ ವಿಚಾರ ಬೇರೆಯವರಿಂದ ಕೇಳಿ ತಿಳಿಯಿತು. ಅವರ ಹೆಸರು ಗೊತ್ತಿಲ್ಲ. ಕೃತಿಕನು ಆತ್ಮಹತ್ಯೆ ಮಾಡಿಕೊಂಡಿದ್ದು ಆರೋಪಿ ಮತ್ತು ಕೃತಿಕನ ಸಾವಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೃತಿಕನು ನನಗೆ ತುಂಬಾ ಗೊತ್ತಿರುವ ವ್ಯಕ್ತಿಯಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.